ಕರ್ನಾಟಕ ಸರ್ಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ/ಪಹಣಿ/ವಿವಾದ/55/2014-15 ದಿನಾಂಕ: 26-05-2016

ಉಪಸ್ಥಿತರು : ಹೆಚ್.ವಿಶ್ವನಾಥ, ತಹಶೀಲ್ದಾರರು,

| ವಾದಿಗಳು | ಪ್ರತಿವಾದಿಗಳು/ಎದುರುದಾರರು |
|---|---|
| ಶ್ರೀ.ಜಯನಾಯ್ಕ ತಂದೆ ಮಿಟ್ಯಾನಾಯ್ಕ | ಶ್ರೀ.ನೇಮ್ಯಾನಾಯ್ಕ ತಂದೆ ಲೇಟ್ ರಾಮಚಂದ್ರ ನಾಯ್ಕ (ಶ್ರೀ. H. ನಾಗೇಶ, ವಕೀಲರು, ಹೂವಿನಹಡಗಲಿ) |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ನಾಗತಿಬಸಾಪುರ | 502/1 | 2-37 |

**ಪ್ರಸ್ತಾವನೆ :**

ಮೇಲಿನ ದಾವಾ ಜಮೀನನ್ನು ವಾದಿಯು ಕ್ರಯ ಪತ್ರದ ಸಂಖ್ಯೆ 3114/14-15 ದಿನಾಂಕ:08-01-2015 ರಂತೆ ಹೋಬ್ಯಾನಾಯ್ಕ ತಂದೆ ಲೇಟ್ ಚಂದ್ರನಾಯ್ಕ ರವರಿಂದ ಕ್ರಯಕ್ಕೆ ಪಡಿದಿರುತ್ತಾರೆ. ಈ ಹಿನ್ನೆಲೆಯಲ್ಲಿ ಜೆ ನಮೂನೆ ಪ್ರಕಾರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 128ರ ಅನ್ವಯ ಹಕ್ಕು ಬದಲಾವಣೆ ಪ್ರಕ್ರಿಯೆಗೆ ಒಳಪಡಿಸಲಾಗಿ, ನಿಗಧಿತ ಅವಧಿಯೊಳಗೆ ಗ್ರಾಮದಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು ನಾಗತಿಬಾಸಾಪುರ ರವರು ನಮೂನೆ-21ನ್ನು ಜಾರಿಮಾಡಿದಾಗ, ದಿನಾಂಕ 19-01-2015ರಂತೆ ಪ್ರತಿವಾದಿಗಳಿಂದ ಲಿಖಿತ ಆಕ್ಷೇಪಣೆ ಸ್ವೀಕೃತವಾಗಿರುವುದರಿಂದ ಕಂದಾಯ ಪರಿವೀಕ್ಷಕರು ಹಡಗಲಿ ರವರು ಎಂ.ಆರ್.ನಂ: ಹೆಚ್ 61/2014-15 ದಿನಾಂಕ12-01-2015 ರ ಪ್ರಕಾರ ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ವಿಚಾರಣೆಗಾಗಿ ಈ ಕಾರ್ಯಾಲಯಕ್ಕೆ ಪ್ರಕರಣವನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿ ಮತ್ತು ಪ್ರತಿವಾದಿಗಳಿಗೆ ಕೇಳಿಕೊಳ್ಳಲು ಅವಕಾಶ ನೀಡಿ, ದಿನಾಂಕ 09-04-2015 ರಿಂದ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಯಾದ ಶ್ರೀ.ಜಯಾನಾಯ್ಕ ತಂದೆ ಮಿಟ್ಯಾನಾಯ್ಕ ಕೊಮಾರನಹಳ್ಳಿ ತಾಂಡ ರವರು ನಾಗತಿಬಸಾಪುರ ಗ್ರಾಮದ ಸ.ನಂ. 502/1 ವಿಸ್ತೀರ್ಣ 2-37 ಎಕರೆ ಜಮೀನನ್ನು ಹೊಬ್ಯಾನಾಯ್ಕ ತಂದೆ ಲೇಟ್ ಚಂದ್ರನಾಯ್ಕ ರವರಿಂದ ಉಪನೋಂದಣಾಕಾಧಿಕಾರಿಗಳು ಹದಡಲಿ ರವರಲ್ಲಿ ನೋಂದಣಿ ದಸ್ತಾವೇಜು ಸಂಖ್ಯೆ 3114/14-15 ದಿನಾಂಕ:08-01-2015 ರಲ್ಲಿ ಖರೀದಿ ಕ್ರಯಕ್ಕೆ ಪಡಿದಿರುತ್ತೇನೆ ಎಂದು ತಿಳಿಸಿ ಅದರಂತೆ ತನ್ನ ಹೆಸರಿಗೆ ಪಹಣಿಯಲ್ಲಿ ಹಕ್ಕು ಬದಲವಣೆ ಮಾಡಲು ಕೋರಿ ತಮ್ಮ ವಾದವನ್ನು ತಿಳಿಸಿರುತ್ತಾರೆ.

ಪ್ರತಿವಾದಿಗಳು ಹಾಗೂ ಅವರ ಪರ ನ್ಯಾಯಾವಾದಿಗಳು ಈ ವಿವಾದಿತ ಜಮೀನುನಿನ ಬಗ್ಗೆ ಮಾನ್ಯ ಜೆ.ಎಂ.ಎಫ್.ಸಿ.ಸಿವಿಲ್ ನ್ಯಾಯಾಲಯ ಹಡಗಲಿ ರವರಲ್ಲಿ ಓ.ಎಸ್.ಸಂಖ್ಯೆ 40/14 ಪ್ರಕರಣವು ವಿಚಾರಣೆ ನಡೆಯುತ್ತಿದ್ದು ಮಾನ್ಯ ನ್ಯಾಯಾಲಯವು ಹಕ್ಕು ಬದಲಾವಣೆ ಮಾಡದಂತೆ ತಡೆಯಾಜ್ಞೆಯನ್ನು ನೀಡಿದ್ದು. ಅದನ್ನು ಉಲ್ಲಂಘನೆ ಮಾಡಿ ಹಾಲಿ ಪಟ್ಟಾದಾರರು ಕಾನೂನು ಬಾಹಿರವಾಗಿ ವಾದಿಗೆ ಮಾರಾಟ ಮಾಡಿರುತ್ತಾರೆ. ಆದ್ದರಿಂದ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಇತ್ಯಾರ್ಥವಾಗುವರಿಗೂ ಕ್ರಯ ಪತ್ರದ ಪ್ರಕಾರ ಹಕ್ಕು ಬದಲಾಣೆ ಮಾಡಬಾರದೆಂದು ತಮ್ಮ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

ಈ ಪ್ರಕರಣದಲ್ಲಿ ವಾದಿ ಮತ್ತು ಪ್ರತಿವಾದಿಗಳ ಹಾಗೂ ಅವರ ಪರ ನ್ಯಾಯಾವಾದಿಗಳ ವಾದವನ್ನು ಆಲಿಸಲಾಯಿತು.ಈ ವಿವಾದಿತ ಜಮೀನಿಗೆ ಮಾನ್ಯ ಜೆ.ಎಂ.ಎಫ್.ಸಿ ನ್ಯಾಯಾಲಯ ಹೂವಿನ ಹಡಗಲಿಯಲ್ಲಿ ಓ.ಎಸ್.ನಂ40/2014 ರಂತೆ ಪ್ರಕರಣ ವಿಚಾರಣೆ ನಡೆಯುತ್ತಿದ್ದು. ಹಾಗೂ ಮಾನ್ಯ ನ್ಯಾಯಾಲಯವು ತತ್ಕಾಲಿಕ ತಡೆಯಾಜ್ಞೆ ನೀಡಿರುವುದರಿಂದ ಅವರ ಆದೇಶವನ್ನು ಕಾಯ್ದಿರಿಸಿ ಈ ಪ್ರಕಣರವನ್ನು ಮುಕ್ತಾಯ ಮಾಡಲು ಈ ಕೆಳಕಂಡ ಆದೇಶ

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆ, ಸಂದರ್ಭ, ಕಾರಣಗಳಿಂದಾಗಿ ಪ್ರತಿವಾದಿಗಳು ನೀಡಿದ ಆಕ್ಷೇಪಣೆಯನ್ನು ಪುರಸ್ಕರಿಸಿದೆ. ಈ ಪ್ರಕರಣದ ದಾವಾ ಜಮೀನಿನ ಬಗ್ಗೆ ಈಗಾಗಲೇ ಓ.ಎಸ್.ನಂ:40/2014ರಂತೆ ಮಾನ್ಯ ಜೆ.ಎಂ.ಎಫ್.ಸಿ ಸಿವಿಲ್ ನ್ಯಾಯಾಲಯ ಹಡಗಲಿನಲ್ಲಿ ವಿಚಾರಣೆ ನಡೆಯುತ್ತಿದ್ದು, ಹಾಗೂ ಗೌರವಾನಿತ ನ್ಯಾಯಾಧೀಶರು ಹಕ್ಕು ಬದಲಾವಣೆ ಮಾಡದಂತೆ ತತ್ಕಾಲಿಕ ತಡೆಯಾಜ್ಞೆ ನೀಡಿರುವುದರಿಂದ ಅವರ ಆದೇಶವನ್ನು ಕಾಯ್ದಿರಿಸಿ ಈ ಪ್ರಕರಣವನ್ನು ಮುಕ್ತಾಯ ಮಾಡಿ ಆದೇಶಿಸಿದೆ. ಪ್ರತಿವಾದಿಗಳು ಬಾದಿತರಾದಲ್ಲಿ ತಮ್ಮ ಹಕ್ಕು ಮತ್ತು ಹಿತಾಸಕ್ತಿಯನ್ನು ಉನ್ನತ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಬಹುದಾಗಿದೆ.

ಈ ಆದೇಶವನ್ನು ಬೆರಳಚ್ಚುಮಾಡಿಸಿ, ದಿನಾಂಕ 26-05-2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ಹಡಗಲಿ.

ಪ್ರತಿಗಳನ್ನು :

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.

2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.